## ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

### ವಿಶೇಷ ಪ್ರಕರಣ ಸಂಖ್ಯೆ: 03/2020

| | | | |
|---|---|---|---|
| ಹೆಸರು | : | ಲಕ್ಷ್ಮೀ ತಳಗೇರಿ | ಫ್ರಾಸಾ-09 |
| ಗಂಡನ ಹೆಸರು | : | ಕಾಡಪ್ಪ | ಚಾಸಾ-20 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ ತಾ ಮುಧೋಳ | |

ದಿನಾಂಕಃ 29-02-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ 1 ನನ್ನ ಅಣ್ಣ. ಚಾಸಾ 2, 16 ರಿಂದ 27 ರವರು ಸಂಬಂಧಿಕರು ಎಂದರೆ ಸರಿ. ಮಲ್ಲಪ್ಪನನ್ನು ಕೊಲೆ ಮಾಡಿದ್ದರು ಅದಕ್ಕೆ ಪೋಲಿಸರು ನನ್ನನು ಸಾಕ್ಷಿ ಹೇಳಲು ಕರೆಸಿದ್ದರು. ವಿಠ್ಠಲ ಆಸ್ಪತ್ರೆಯ ಸಲುವಾಗಿ ನಮ್ಮ ಹತ್ತಿರ 30,000/- ರೂಗಳು ತೆಗೆದುಕೊಂಡು ಹೋಗಿದ್ದ. ಅವುಗಳನ್ನು ನಮಗೆ ಮರಳಿ ಕೊಡಲು ತೋಟದ ಮನೆಗೆ ಬಂದಿದ್ದ. ಆಗ ನನ್ನ ಅತ್ತೆ ಚಾ ಮಾಡಲು ಹೇಳಿದಳು. ಚಾ ಮಾಡಿ ಕೊಟ್ಟೆ, ಆಗ ನನ್ನ ಅತ್ತೆ ಮೈದುನ, ಮಲ್ಲಪ್ಪ ಚಾ ಕುಡಿದರು. ನಂತರ ವಿಠ್ಠಲ ಮತ್ತು ಮಲ್ಲಪ್ಪ ಬೈಕ ಮೇಲೆ ಬೀಡಿ ತರಲು ಹೋದರು. ನಂತರ ನಾವು ತೋಟದಲ್ಲಿ ಕೆಲಸಕ್ಕೆ ಹೋದೆವು. ಆಗ ತೋಟದಲ್ಲಿ ನನ್ನ ಅತ್ತೆ ಚೀರಾಡುತ್ತಿದ್ದಳು. ನಂತರ ನಾವು ಓಡಿ ಬಂದು ವಿಚಾರಿಸಲಾಗಿ ಯಾರನ್ನು ಕಡಿದಿದ್ದಾರೆ ಎಂದು ಹೇಳಿದಳು. ನಾನು ಹೋಗುವಷ್ಟರಲ್ಲಿ ಮನೆಯಲ್ಲಿ ಎಲ್ಲರೂ ಹೋಗಿದ್ದರು. ನಂತರ ನಾನು ಹೋದೆ. ವಿಠ್ಠಲ ಇತನ ಶವ ಹುರದೊಡ್ಡಿ ನೀರಿನ ಕಾವಲಿಯಲ್ಲಿ ಬಿದ್ದಿತ್ತು. ಅವರ ಬಲಗಣ್ಣು ಹೋಗಿತ್ತು. ಹಾಗೂ ಬಲಭಾಗದ ಮೂಗು ಕತ್ತರಿಸಿತ್ತು. ತಲೆಯಿಂದ ಕುತ್ತಿಗೆಯವರೆಗೆ ಕಡಿದಿದ್ದರು. ನಂತರ ಮಲ್ಲಪ್ಪನ ಶವ ಕಲ್ಲೊಳಿಯಲ್ಲಿ ಬಿದ್ದಿತ್ತು. ಅವರ ಎಡಭಾಗದ ಕುತ್ತಿಗೆ ಕಡಿದಿದ್ದರು. ಸ್ವಲ್ಪ ಉಳಿದಿತ್ತು. ಎಡಗೈ ಅಂಗೈ ಕತ್ತರಿಸಿದ್ದರು ರಕ್ತ ಸುಮಾರು ದೂರ ಹರಿದಿತ್ತು. ಬಟ್ಟೆ ಹಾಗೂ

ಚಪ್ಪಲುಗಳಿಗೆ ರಕ್ತದ ಕಲೆಯಾಗಿತ್ತು. ನಂತರ ರೇಖಾ ಕಾಂಚನಾ ಬಂದು 13 ಜನ ಸೇರಿ ಕೊಲೆ ಮಾಡಿದ್ದಾರೆ ಎಂದು ಹೇಳಿದರು. ಅದರಲ್ಲಿ 3-4 ಜನರ ಹೆಸರು ಗೊತ್ತಿದೆ ಎಂದು ಹೇಳಿದರು. ಅವರ ಹೆಸರು ರಾಜು, ಹನಮಂತ ಮಲ್ಲಪ್ಪ ಎಂದು ಗೊತ್ತಾಯಿತು. ಮೂ ಮಾ 1, 2, 3, 6 ಮತ್ತು 17 ನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟಿಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಸಿ.ಹೆಚ್ ಅವರಿಂದಃ**

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ವೇಳೆ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**

# ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

## ವಿಶೇಷ ಪ್ರಕರಣ ಸಂಖ್ಯೆ: 03/2020

| | | | |
|---|---|---|---|
| ಹೆಸರು | : | ಸಾಯವ್ವ ಗಿರಿವ್ವಗೋಳ | ಫ್ರಾಸಾ-08 |
| ತಂದೆಯ ಹೆಸರು | : | ದತ್ತು | ಚಾಸಾ-19 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ ತಾ ಮುಧೋಳ | |

ದಿನಾಂಕಃ 29-02-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ 1 ನನ್ನ ಅಣ್ಣ. ಚಾಸಾ 2, 16 ರಿಂದ 27 ರವರು ಸಂಬಂಧಿಕರು ಎಂದರೆ ಸರಿ. ನನ್ನ ಅಣ್ಣ ವಿಠ್ಠಲ ಮತ್ತು ಮಲ್ಲೆಪ್ಪ ಅವರು ನಮ್ಮ ಹತ್ತಿರ ಹಣ ಪಡೆದಿದ್ದರು, ಹಣ ಮರಳಿ ನೀಡಲು ಬಂದಿದ್ದರು. ಅದು 30,000/- ರೂಗಳು ಇತ್ತು. ಮದ್ಯಾಹ್ನ 3-00 ರಿಂದ 3-30 ಗಂಟೆಗೆ ಬಂದಿದ್ದರು. ಹಣ ಕೊಟ್ಟರು ಚಾ ಕುಡಿದರು. ಆರೋಪಿ ಮಲ್ಲಪ್ಪ ಬುಲೆಟ್ ಗಾಡಿ ತೆಗೆದುಕೊಂಡು 2-3 ಸಲ ತಿರುಗಾಡಿದರು. ಈ ಮೊದಲು ಜಗಳ ಆಗಿತ್ತು. ಆಗ ಈ ಜಗಳ ಬಗೆ ಹರಿದಿದೆಯೋ ಇಲ್ಲವೂ ಎಂದು ವಿಠ್ಠಲನಿಗೆ ಕೇಳಿದೆ. ಆಗ ವಿಠ್ಠಲ ನಮ್ಮ ಜಗಳ ಬಗೆ ಹರಿದಿದೆ ಕೋರ್ಟಗೆ ಅಡಾಡ್ಡುವುದು ಇದೆ ಎಂದು ಹೇಳಿದ. ನಂತರ ವಿಠ್ಠಲ ಜೊತೆ ನನ್ನ ತಂದೆ ಮಲ್ಲೆಪ್ಪ ಬೀಡಿ ಕಡ್ಡಿ ಪಟ್ಟಣ ತರುತ್ತೇನೆ ಎಂದು ಬೈಕ ಮೇಲೆ ಹೋದರು. ಅವರು ಹೋದ 5-6 ನಿಮಿಷದೊಳಗೆ ರಸ್ತೆಯಲ್ಲಿ ತಿರುಗಾಡುವವರು ಓಡಿ ಬಂದು ವಿಠ್ಠಲ ಮತ್ತು ಮಲ್ಲೆಪ್ಪನನ್ನು ಕೊಲೆ ಮಾಡಿದ್ದಾರೆ ಎಂದು ಹೇಳಿದರು. ನಮ್ಮ ಮನೆಯಲ್ಲಿ ಎಲ್ಲರೂ ತೋಟಕ್ಕೆ ಕೆಲಸಕ್ಕೆ ಹೋಗಿದ್ದರು. ಎಲ್ಲರೂ ಬಂದ ನಂತರ ಹೋಗಿ ನೋಡಲಾಗಿ ರಸ್ತೆಯ ಮೇಲೆ ಕಲ್ಲೋಳಿ ರಸ್ತೆಯಲ್ಲಿ ಮಲ್ಲೆಪ್ಪನ ಶವ ಬಿದ್ದಿತ್ತು. ವಿಠ್ಠಲನ ಶವ ತೆಗ್ಗಿನಲ್ಲಿ ಬಿದ್ದಿತ್ತು. ವಿಠ್ಠಲನ ಬಲ ತಲೆ, ಕಣ್ಣು ಮೂಗು, ಕೈ ಕುತ್ತಿಗೆ, ಎಲ್ಲ ಅಂಗಾಂಗಳನ್ನು ಚೂರು ಚೂರು ಮಾಡಿದ್ದರು. ಕಿವಿ,

ಮೂಗು ಕತ್ತರಿಸಿದ್ದರು. ಕುತ್ತಿಗೆ ಕತ್ತರಿಸಿದ್ದರು ಸ್ವಲ್ಪ ಉಳಿದಿತ್ತು. ಮಲೆಪ್ಪ ಕುತ್ತಿಗೆ ಕತ್ತರಿಸಿದ್ದರು. ರಕ್ತ ಹಳ್ಳ ಹರಿದಂತೆ ಹರಿದಿತ್ತು. ರೇಣುಕಾ ಮತ್ತು ಕಾಂಚನಾ ಪೂಲ್ ಕೆಳಗೆ ಕುಳಿತಿದ್ದರು. ಕೂಗಾಡಿದರೆ ನಮ್ಮನ್ನು ಕಡಿಯುತ್ತಾರೆ ಎಂದು ಅವರು ಬಾಯಿ ಮಾಡಲಿಲ್ಲ. ಒಟ್ಟು 13 ಜನ ಕೊಲೆ ಮಾಡಿದ್ದಾರೆ ಎಂದು ಹೇಳಿದರು. ಅವರ ಹೆಸರು ನೆನಪಿಲ್ಲ. ಸ್ಥಳದಲ್ಲಿ ಮೂರು ಬೈಕ ಇದ್ದವು. ಆರೋಪಿತರು ನಾವು ಬರುವಷ್ಟರಲ್ಲಿ ಅವರು ಹೋಗಿದ್ದರು. ಅವರು ಕೆನಾಲ್ ಕಡೆಗೆ ಹೋಗಿದ್ದರು ನಮ್ಮ ಸ್ವಲ್ಪ ಕಾಣಿಸಿತು. ಘಟನೆಯ ಬಗ್ಗೆ ನಾನು ಪೋಲಿಸರ ಮುಂದೆ ನಮ್ಮ ತೋಟದಲ್ಲಿ ಹೇಳಿಕೆ ನೀಡಿರುತ್ತೇನೆ. ಮೂ ಮಾ 1, 2, 3, 6 ಮತ್ತು 17 ನ್ನು ನೋಡಿ ಗುರ್ತಿಸಿರುತ್ತಾರೆ.

**<u>ಪಾಟಿಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಸಿ.ಹೆಚ್ ಅವರಿಂದಃ</u>**

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ವೇಳೆ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**

# ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

## ವಿಶೇಷ ಪ್ರಕರಣ ಸಂಖ್ಯೆ 03/2020

| | | | |
|---|---|---|---|
| ಹೆಸರು | : | ಯಮನವ್ವ ತಳಗೇರಿ | ಫ್ರಾಸಾ-07 |
| ತಂದೆಯ ಹೆಸರು | : | ಮಲ್ಲಪ್ಪ | ಚಾಸಾ-18 |
| ವಯಸ್ಸು | : | 60 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ ತಾ ಮುಧೋಳ | |

ದಿನಾಂಕಃ 29-02-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ**

ನನ್ನ ಗಂಡನನ್ನು ಕೊಲೆ ಮಾಡಿರುತ್ತಾರೆ. ನನ್ನ ಗಂಡ ಮತ್ತು ಮೈದುನನ್ನು ಕೊಲೆ ಮಾಡಿರುತ್ತಾರೆ. ಆರೋಪಿತರ ಪರಿಚಯ ಇರುತ್ತದೆ. ವಿಠ್ಠಲ 30,000/- ರೂಗಳನ್ನು ತೆಗೆದುಕೊಂಡು ಹೋಗಿದ್ದ ಅದನ್ನು ಕೊಡಲು ಬಂದಿದ್ದ. ಆ ಸಮಯದಲ್ಲಿ ನಾವು ಟೀ ಮಾಡಿ ಕುಡಿದೆವು. ನಂತರ ಮಲ್ಲಪ್ಪ ರಸ್ತೆಯಲ್ಲಿ ತಿರುಗಾಡುತ್ತಿದ್ದ. ಆಗ ನನಗೆ ಸಂಶಯ ಬಂತು. ನಂತರ ನಾನು ವಿಠ್ಠಲನಿಗೆ ಜಗಳ ಮುಗಿದಿದೆಯೋ ಇಲ್ಲವೋ ಎಂದು ಕೇಳಿದೆ. ಆಗ ಅವನು ನಾನು ಯಾರಿಗೆ ಹೊಡಿ ಬಡಿ ಮಾಡಿಲ್ಲ ಎಂದು ಹೇಳಿದ. ಬೀಡಿ ತರಲು ನನ್ನ ಗಂಡ ಬೈಕ ಮೇಲೆ ವಿಠ್ಠಲ ಜೊತೆ ಊರಿಗೆ ಹೋದ. ನಂತರ ನಾನು ಹೊಲದ ಕೆಲಸಕ್ಕೆ ಹೋದೆ. ನನ್ನ ಮನೆ ಹೊಲದಲ್ಲಿದೆ. ಬೈಕ ಮೇಲೆ ಹೋಗುವಾಗ ಕಾರ್ ಗಾಡಿ ಅಡ್ಡ ನಿಲ್ಲಿಸಿದರು. ವಿಠ್ಠಲನ ಬಲ ಮುಖದ ಮೇಲೆ ಹಾಗೂ ತಲೆಯ ಮೇಲೆ ಕಡಿದಿದ್ದರು, ಕುತ್ತಿಗೆ ಕಡಿದಿದ್ದರು ಹಾಗೂ ಮೂಗು ಹರಿದಿತ್ತು, ಕಣ್ಣು ಹೊರಗೆ ಬಂದಿತ್ತು. ಎಡಗೈನ ನಾಲ್ಕು ಬೆರಳಚ್ಚು ಕತ್ತರಿಸಿದ್ದರು. ನಾನು ಹೋದಾಗ ಶವ ಅಂಗಾತವಾಗಿ ಬಿದ್ದಿತ್ತು. ವಿಠ್ಠಲನ ಶವ ಕೆನಾಲ್ ನೀರಿನ ಕಾವಲಿಯಲ್ಲಿ ಬಿದ್ದಿತ್ತು. ರಸ್ತೆಯ ಮೇಲೆ ರಕ್ತ ಹರಿಯುತ್ತಿತ್ತು. ಸ್ಥಳದಲ್ಲಿ ಒಂದು ವಲ್ಲಿ, ಅಂಗಿ, ಬನಿಯನ್ ಟೋಪಿಗೆ ಶಲ್ಯ ಧರಿಸಿದ್ದರು.

ಒಂದು ಕಾರ್ ಗಾಡಿ ಮೂರು ಮೋಟಾರ ಸೈಕಲನ್ನು ತೆಗೆದುಕೊಂಡು ಕೆನಾಲ್ ಕಡೆಗೆ ಹೋದರು. ಕಾಂಚನಾ ಮತ್ತು ರೇಖ ಎಂಬುವವರು ಘಟನೆಯನ್ನು ನೋಡಿದ ಬಗ್ಗೆ ಹೇಳಿದರು. ರೇಖಾ, ಕಾಂಚನಾ ನನ್ನ ಮೊಮ್ಮಕ್ಕಳು. ಇವರು ಕರಾಟೆ ಕಲಿಯಲು ಮುಧೋಳಕ್ಕೆ ಹೋಗಿದ್ದರು. ಅವರು ಬಂದು ಘಟನೆಯ ಬಗ್ಗೆ ನನಗೆ ಹೇಳಿದರು. ಘಟನಾ ಸ್ಥಳದ ಹರಿಯಲ್ಲಿ ಬಚ್ಚಿಟ್ಟುಕೊಂಡು ಕುಳಿತಿದ್ದರು. ನಂತರ ನಾವು ಓಡಿ ಬಂದು ವಿಚಾರಿಸಲಾಗಿ ದೊಡ್ಡಪ್ಪ ಮತ್ತು ಅಜ್ಜನನ್ನು ಕಡಿದು ಹೋದರು ಎಂದು ಹೇಳಿದರು. 30 ಜನ ಕೊಲೆ ಮಾಡಿ ಹೋಗಿದ್ದಾರೆ ಎಂದು ಹೇಳಿದರು. 4-5 ದಿನಗಳ ನಂತರ ಪೋಲಿಸರು ಬಂದಾಗ ಘಟನೆಯ ಬಗ್ಗೆ ಹೇಳಿಕೆ ನೀಡಿದ್ದೇನೆ. ಅವರ ಬಟ್ಟೆಗಳನ್ನು ನೋಡಿದರೆ ಕಂಡು ಹಿಡಿಯುತ್ತೇನೆ. ಮೂ ಮಾ 2, 3, 6 ಮತ್ತು 17 ನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟಿಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಸಿ.ಹೆಚ್ ಅವರಿಂದಃ**

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ವೇಳೆ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**